ಓ.ಎಸ್. ನಂ.139/2024
ಪಿಡಬ್ಲು-1

ದಿನಾಂಕ 06.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ**

ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ವಕೀಲರು ನನಗೆ ಗೊತ್ತಿರುವ ಭಾಷೆಯಲ್ಲಿ ಓದಿ ಹೇಳಿರುತ್ತಾರೆ.

ದಿನಾಂಕ 27.04.2017 ರ ಖರೀದಿ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ಖರೀದಿ ಕರಾರು ಪತ್ರದಲ್ಲಿನ ಪ್ರತಿವಾದಿಯ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಖರೀದಿ ಕರಾರು ಪತ್ರದಲ್ಲಿನ ಸಾಕ್ಷಿದರನಾದ ಶಿವಲಿಂಗಪ್ಪ ತಂದೆ ಮಲ್ಲಿಕಾರ್ಜುನ ಪೂಜಾರಿರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಖರೀದಿ ಕರಾರು ಪತ್ರದಲ್ಲಿನ ಸಾಕ್ಷಿದರನಾದ ಶರಣಪ್ಪ ತಂದೆ ಗುಂಡಪ್ಪ ಕುಂಬಾರಸಿರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಖರೀದಿ ಕರಾರು ಪತ್ರದಲ್ಲಿನ ದಸ್ತು ಬರಹಗಾರಾದ ಜಾವೀದ ಪಟೇಲರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ವಡಗೇರಾ ಗ್ರಾಮದ ಜಮೀನು ಸರ್ವೆ ನಂ.208/ಇ ರ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ಲೀಗಲ್ ನೋಟಿಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಎರಡು ಅಂಚೆ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ